ಶೈಲಿಗಿಂತ ವಸ್ತುವಿಷಯ ಮುಖ್ಯ; ಭಾರತವು ಹಳ್ಳಿಗಳ ದೇಶವಾದ್ದರಿಂದ ಹಳ್ಳಿಗಳ ಕಷ್ಟ, ಸಾಧ್ಯತೆಗಳನ್ನು ಕುರಿತು ಹೆಚ್ಚು ಬರೆಯಬೇಕು ಎಂಬ ಗಾಂಧೀ ಕರೆಯಿಂದಾಗಿ ದೇಶಭಾಷೆಗಳ ಪತ್ರಿಕೆಗಳಲ್ಲಿ ಹಳ್ಳಿಗಳ ನೋಟಗಳು ಪ್ರಕಟವಾಗಲಾರಂಭಿಸಿದವು. ಒಳ್ಳೆಯದರ ಬಗ್ಗೆ ಸಾರ್ವಜನಿಕ ಅಭಿಪ್ರಾಯ ರೂಪಿಸುವುದು ಪತ್ರಕರ್ತರ ಕರ್ತವ್ಯ ಎಂಬ ಗಾಂಧೀ ಪತ್ರಿಕೋದ್ಯಮದ ಮುಖ್ಯ ಪಾಠ ಭಾರತದ ಪತ್ರಿಕೋದ್ಯಮದ ಆರಂಭ ಘಟ್ಟದಲ್ಲಿ ಆರೋಗ್ಯಕರ ದಿಕ್ಕನ್ನು ತೋರಿಸಿಕೊಟ್ಟಿತು.



ಗಾಂಧೀ ಪತ್ರಿಕೋದ್ಯಮದ ಇನ್ನಿತರ ಶಿಸ್ತು ಹಾಗೂ ವೃತ್ತಿಪರತೆಗಳು ಕೂಡ ಇವತ್ತಿಗೂ ಮುಖ್ಯವಾಗಿವೆ. ನಿಗದಿಯಾದ ಕಾಲಕ್ಕೆ ಸರಿಯಾಗಿ ಪತ್ರಿಕೆ ಹೊರಬರಬೇಕು. ಓದುಗರು ತಪ್ಪು ತೋರಿಸಿದರೆ ಒಪ್ಪಿಕೊಳ್ಳಬೇಕು. ಓದುಗರ ಜೊತೆ ಸಂವಾದ ನಡೆಸಬೇಕು. 'ಪತ್ರಕರ್ತರು ಯಾರಿಗೆ ಜವಾಬ್ದಾರರಾಗಿರಬೇಕು? ಮಾಲೀಕರಿಗೋ? ತಮಗೋ? ತಾವು ಪ್ರತಿನಿಧಿಸುವ ವರ್ಗಕ್ಕೋ? ಓದುಗರಿಗೋ?' ಈ ಪ್ರಶ್ನೆಗಳಿಗೆ ಗಾಂಧೀಜಿಯ ಉತ್ತರ ಸ್ಪಷ್ಟವಾಗಿತ್ತು: ಪತ್ರಕರ್ತರು ಅಂತಿಮವಾಗಿ ಓದುಗರಿಗೆ ಜವಾಬ್ದಾರರಾಗಿರಬೇಕು. ಪತ್ರಿಕೆ ನಿಂತರೆ ಉಳಿದ ಚಂದಾ ಹಣವನ್ನು ವಾಪಸ್ ಮಾಡಬೇಕು. ಜಾಹಿರಾತುಗಳ ಪ್ರಕಟಣೆ ಬರವಣಿಗೆಯನ್ನು ಇಕ್ಕಟ್ಟಿಗೆ ಸಿಕ್ಕಿಸುವುದರಿಂದ ಜಾಹಿರಾತಿಲ್ಲದೆ ಪತ್ರಿಕೆ ನಡೆಸಿ ಆರ್ಥಿಕವಾಗಿ ಗಟ್ಟಿಯಾಗಬೇಕು. ಪತ್ರಿಕೆ ಓದುಗರನ್ನು ನಿರಂತರವಾಗಿ ತಿದ್ದುತ್ತಲೇ ಇರಬೇಕು. ಇವೆಲ್ಲ ಗಾಂಧೀಜಿ ತಾವೂ ಕಲಿತು, ಎಲ್ಲರಿಗೂ ಕಲಿಸಿದ ಪತ್ರಿಕೋದ್ಯಮದ ಪಾಠಗಳಾಗಿದ್ದವು. ಒಂದೆರಡು ತಿಂಗಳುಗಳ ಮೊದಲೇ ಮುಂದಿನ ಸಂಚಿಕೆಗಳಲ್ಲಿ ಏನಿರಬೇಕು, ಯಾರು ಏನು ಬರೆಯಬೇಕು ಎಂಬುದನ್ನು ಕೂಡ ಗಾಂಧೀಜಿ ಟಿಪ್ಪಣಿ ಮಾಡಿಕೊಳ್ಳುತ್ತಿದ್ದರು. ಪ್ರಾಮಾಣಿಕನಾದ ಬುದ್ಧಿವಂತ ವ್ಯಕ್ತಿಯೊಬ್ಬ ತಾನು ಮಾಡುವ ಎಲ್ಲ ಕೆಲಸಗಳನ್ನೂ ವ್ಯವಸ್ಥಿತವಾಗಿ ಮಾಡಬೇಕಾದ ಅಗತ್ಯವನ್ನೂ ಗಾಂಧೀ ಪತ್ರಿಕೋದ್ಯಮ ಸೂಚಿಸುತ್ತದೆ. ಹಾಗೆ ವ್ಯವಸ್ಥಿತವಾಗಿ, ಮನಮುಟ್ಟಿ ಕೆಲಸ ಮಾಡುತ್ತಿದ್ದರಿಂದಲೇ ಗಾಂಧೀಜಿ ಜಗತ್ತಿನ ಬೃಹತ್ ಸ್ವಾತಂತ್ರ್ಯ ಚಳವಳಿಯಿಂದ ಹಿಡಿದು ದೇಶ, ಸಮಾಜ, ವ್ಯಕ್ತಿಗಳ ಪರಿವರ್ತನೆಯ ಕೆಲಸಗಳ ತನಕ ಎಲ್ಲ ಕೆಲಸಗಳಲ್ಲೂ ಇಡಿಯಾಗಿ, ಪೂರ್ಣವಾಗಿ ತೊಡಗಿ ನಿತ್ಯ ಬರವಣಿಗೆ ಮಾಡಿದರು.

ಸುಮಾರು 97 ಸಂಪುಟಗಳಲ್ಲಿ ಪ್ರಕಟವಾಗಿರುವ ಗಾಂಧೀ ಚಿಂತನೆಗಳಲ್ಲಿ ಅವರು ಸಂಪಾದಿಸಿದ ಐದು ಪತ್ರಿಕೆಗಳಿಗೆ ಬರೆದ ಬರಹಗಳ ಪಾಲು ಹೆಚ್ಚು ಇದೆ ಎಂಬುದು ಗಾಂಧೀ ಬರವಣಿಗೆಯಲ್ಲಿ ಪತ್ರಿಕೋದ್ಯಮದ ಮಹತ್ವವನ್ನು ಸೂಚಿಸುತ್ತದೆ. 'ತಮ್ಮ ಜೀವನದ ಎರಡು ಘಟ್ಟಗಳಲ್ಲಿ ಮಾತ್ರ ಪೂರ್ಣ ಪ್ರಮಾಣದಲ್ಲಿ ಬೀದಿಗಿಳಿದಿದ್ದ ಗಾಂಧೀಜಿ, ಉಳಿದಂತೆ ಬಹುತೇಕ ವರ್ಷಗಳನ್ನು ಚಿಂತನೆ ಹಾಗೂ ಬರಹಗಳಲ್ಲಿ ಕಳೆದಿದ್ದರು' ಎಂಬುದನ್ನು ಶ್ರೀಲಂಕಾದ ಗಾಂಧೀವಾದಿ ಟಿ.ಕೆ. ಮಹದೇವನ್ ಗುರುತಿಸಿದ್ದಾರೆ. ಗಾಂಧೀಜಿ ತಮ್ಮ ಕೊನೆಯ ಮೂವತ್ತು ವರ್ಷಗಳ ಕಾಲ ದಿನದಲ್ಲಿ ಒಂದು ಗಂಟೆಯಾದರೂ ಚರಕಾದಿಂದ ನೂಲು ತೆಗೆಯುವುದನ್ನು ರೂಢಿಸಿಕೊಂಡಿದ್ದು ನೆನಪಾಗುತ್ತದೆ. ಚರಕಾ, ಚಿಂತನೆ, ಮಾತು, ಕ್ರಿಯೆ, ಬರವಣಿಗೆ, ಪ್ರಾರ್ಥನೆ, ಹೀಗೆ ಎಲ್ಲ ಕ್ರಿಯೆಗಳ ಹಿಂದಿನ ಧ್ಯಾನಸ್ಥ ಸ್ಥಿತಿ ಗಾಂಧೀಜಿಯ ಒಟ್ಟು ವ್ಯಕ್ತಿತ್ವದಲ್ಲಿ ಬೆಸೆದುಕೊಂಡಿದ್ದ ಅಪೂರ್ವ ಚಿತ್ರ ಅವರ 153ನೆಯ ಹುಟ್ಟುಹಬ್ಬದ ಸಂದರ್ಭದಲ್ಲಿ ಕಣ್ಮುಂದೆ ಮೂಡತೊಡಗುತ್ತದೆ.

'ಸತ್ಯದೊಂದಿಗೆ ನನ್ನ ಪ್ರಯೋಗ' ಎಂಬ ಆತ್ಮಕತೆ ಬರೆದ ಗಾಂಧೀಜಿ ತಮ್ಮ ಬದುಕಿನ ನಲವತ್ತಕ್ಕೂ ಹೆಚ್ಚು ವರ್ಷಗಳ ಕಾಲ ಮಾಡಿದ ಪತ್ರಿಕಾ ಬರವಣಿಗೆ ಕೂಡ ನಿಜವಾದ ಅರ್ಥದಲ್ಲಿ ಸತ್ಯಾನ್ವೇಷಣೆಯೇ ಆಗಿದ್ದುದು ತೀರ ಸಹಜವಾಗಿತ್ತು. ●